

# ಮೆಟರ್ನಿಟಿ ಉಡುಪು ವೈವಿಧ್ಯ



**ಬಾಣಂತಿಯರಿಗಾಗಿ ಫ್ಯಾಷನೆಬಲ್ ಆಗಿರುವ ಫೀಡಿಂಗ್ ಉಡುಗೆಗಳು ಮಾರುಕಟ್ಟೆಗೆ ಬಂದಿವೆ. ಸೆಲೆಬ್ರಿಟಿಗಳು ಸೇರಿದಂತೆ ಸಾಮಾನ್ಯ ಮಹಿಳೆಯರೂ ಈ ಉಡುಪಿನತ್ತ ಆಕರ್ಷಿತರಾಗಿದ್ದಾರೆ. ಈಗ ಮೆಟರ್ನಿಟಿ ಉಡುಗೆಯಲ್ಲೂ ಸಾಕಷ್ಟು ವೈವಿಧ್ಯದ ದಿರಿಸುಗಳು ಲಭ್ಯ.**

■ ಪವಿತ್ರಾ ರಾಘವೇಂದ್ರ ಶೆಟ್ಟಿ

ಸಾಮಾನ್ಯವಾಗಿ ನಾವು ಧರಿಸುವ ಉಡುಪು ನಮಗೆ ಆತ್ಮವಿಶ್ವಾಸ ಕೊಡುತ್ತದೆ ಎಂಬ ಮಾತಿದೆ. ಬಟ್ಟೆ ಖರೀದಿಸುವಾಗ ಈ ಬಣ್ಣ ತಮಗೆ ಒಪ್ಪುತ್ತಾ, ಈ ವಿನ್ಯಾಸ ಸರಿಯಾಗಿ ಹೊಂದಿಕೆಯಾಗುತ್ತಾ ಎಂದು ಕನ್ನಡಿ ಮುಂದೆ ನಿಂತು ನಾಲ್ಕೈದು ಬಾರಿ ನೋಡುತ್ತೇವೆ. ಆದರೆ ಅದೇ ಹೆಣ್ಣು ತಾಯ್ತನ ಸಂಭ್ರಮಿಸುವಾಗ ಧರಿಸುವ ಬಟ್ಟೆಗಿಂತ ಹೆಚ್ಚು ಆಕೆ ಮಗುವಿನ ಆರೈಕೆ, ಲಾಲನೆ ಪಾಲನೆಯಲ್ಲಿಯೇ ಕಳೆದುಹೋಗುತ್ತಾಳೆ. ಸಾಮಾನ್ಯವಾಗಿ ಮಗುವಿಗೆ ಹಾಲುಣಿಸುವುದಕ್ಕೆ ತೊಂದರೆಯಾಗಬಾರದೆಂದು ನೈಟಿಯ ಮೊರೆ ಹೋಗುವವರೇ ಹೆಚ್ಚು. ಹೊರಗಡೆ ಹೋಗುವಾಗ, ಫ್ಯಾಷನಬಲ್ ಆಗಿರಬೇಕು ಎಂಬುವವರಿಗೆ ಸೂಕ್ತವಾದ ಫೀಡಿಂಗ್ ದಿರಿಸು ಯಾವುದು ಎಂಬ ಗೊಂದಲ ಇರುತ್ತದೆ. ಏಕೆಂದರೆ ಫೀಡಿಂಗ್ ಉಡುಪುಗಳಲ್ಲಿ ಆಯ್ಕೆ ಕಡಿಮೆ ಇರುತ್ತದೆ. ಅದರಲ್ಲಿ ವಿಭಿನ್ನವಾದ ವಿನ್ಯಾಸಗಳಿರುವುದಿಲ್ಲ ಎಂಬ ಕೂಗಿದೆ. ಈಗ ಕಾಲ ಬದಲಾಗಿದೆ. ಮಗುವಿಗೆ ಹಾಲುಣಿಸುವ ದಿರಿಸಿನಲ್ಲಿಯೂ ನಾನಾ